

# ಸಿನಿಮಾ ವಿಮುಖಿ ಸೋಫಿಯಾ

ಬಿಗ್‌ಬಾಸ್ 7, ಕಾಮಿಡಿ ನೈಟ್ಸ್ ಬಚಾವ್ರೊ, ಸೂಪರ್‌ಡೂಡ್, ಕ್ಯಾಷ್ ಆ್ಯಂಡ್ ಕ್ಯಾರಿ, ನಚ್ಲೆ ಲಂಡನ್ ಸೇರಿದಂತೆ ಬಾಲಿವುಡ್ ಮತ್ತು ಇಂಗ್ಲಿಷ್ ಟೆಲಿವಿಷನ್ ಕಾರ್ಯಕ್ರಮ ಹಾಗೂ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದ ಸೋಫಿಯಾ ಹಯಾತ್ ಎಂಬ ರೂಪದರ್ಶಿಯ ಹೆಸರು ನೆನಪಿರಬೇಕು. ಆಕೆಯೀಗ ರೂಪದರ್ಶಿಯಲ್ಲ. ನಟಿಯೂ ಅಲ್ಲ, ಟೆಲಿವಿಷನ್ ಕಾರ್ಯಕ್ರಮಗಳ ನಿರೂಪಕಿಯೂ ಅಲ್ಲ. ಸೋಫಿಯಾ ಹಯಾತ್ ಈಗ, ಗಾಯಿಯಾ ಸೋಫಿಯಾ ಮದರ್ ಎಂಬ ಸನ್ಯಾಸಿನಿ. ಸೋಫಿಯಾ ಅಧ್ಯಾತ್ಮದತ್ತ ಜಾರಿ ಆಗಲೇ ಆರೇಳು ತಿಂಗಳು ಉರುಳಿದೆ. ಥಳಕು ಬಳುಕಿನ ಬದುಕಿನಿಂದ ಆಕೆಯನ್ನು ಅಧ್ಯಾತ್ಮಕ್ಕೆ ಸೆಳೆದ ಸಂಗತಿ ಯಾವುದು ಎನ್ನುವುದು ಇನ್ನೂ ನಿಗೂಢ. ಈ ಅವಧಿಯಲ್ಲಿ ಮತ್ತೆ ಬಾಲಿವುಡ್‌ನಲ್ಲಿ ಕಾಣಿಸಿಕೊಳ್ಳುವ ಬಯಕೆ ತನ್ನಲ್ಲಿ ಉಂಟಾಗಿಲ್ಲ ಎನ್ನುತ್ತಾಳೆ ಸೋಫಿ.

‘ನಟನೆ ಮತ್ತು ಮನರಂಜನೆ ಎರಡೂ ನನಗಿಷ್ಟವೇ. ನನ್ನ ಸಮಯ ತುಂಬಾ ಪವಿತ್ರವಾದುದು. ಮನರಂಜನೆಗಾಗಿ ಅದನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ನನ್ನ ಬಳಿ ಬರುವ ಯಾವುದೇ ಸಿನಿಮಾ ಅವಕಾಶವನ್ನು ಹೃದಯವೇ ನಿರ್ಣಯಿಸುತ್ತದೆ’ ಎಂದಿದ್ದಾಳೆ ಆಕೆ.

ಸೋಫಿಯಾ ಮತ್ತು ಕ್ರಿಕೆಟಿಗ ರೋಹಿತ್ ಶರ್ಮಾನ ಪ್ರೀತಿ ಗೀತಿ ಇತ್ಯಾದಿ ಈ ಮೊದಲು ಸಾಕಷ್ಟು ಸದ್ದು ಮಾಡಿತ್ತು. ಆದರೆ ಏಕಾಏಕಿ ಇಬ್ಬರೂ ದೂರವಾದರು. ರಿತಿಕಾ ಸಜ್ದೆ ಜತೆ ರೋಹಿತ್ ಹಸೆಮಣೆ ಏರಿದ ಬಳಿಕ ಆತನೊಂದಿಗಿನ ಸಂಪರ್ಕ ಕಡಿದುಕೊಂಡಿರುವುದಾಗಿ ಸೋಫಿ ಹೇಳಿಕೊಂಡಿದ್ದಾಳೆ. ‘ನಾನು ಆತನೊಂದಿಗೆ ಸಂಪರ್ಕ ಇರಿಸಿಕೊಂಡಿಲ್ಲ. ಆತ ಮದುವೆ ಬಳಿಕ ಖುಷಿಯಾಗಿದ್ದಾನೆ ಎಂದು ಭಾವಿಸಿದ್ದೇನೆ. ನನ್ನ ಸಂಬಂಧವೇನಿದ್ದರೂ ಆತ್ಮ ಆಧಾರಿತ ಮತ್ತು ಪವಿತ್ರ. ಅದು ಸುಂದರವಾಗಿದೆ ಮತ್ತು ಎಲ್ಲರಿಗೂ ದೊರಕುವಂತಾಗಲಿ ಎಂದು ಬಯಸುತ್ತೇನೆ’ ಎಂಬುದಾಗಿ ಪರಿತ್ಯಕ್ತಳಂತೆ ಮಾತನಾಡಿದ್ದಾಳೆ ಸೋಫಿ. ಆಕೆಯ ವೈರಾಗ್ಯಕ್ಕೆ ರೋಹಿತ್‌ನೊಂದಿಗಿನ ಪ್ರೇಮ ವೈಫಲ್ಯ ಕಾರಣವೇ ಎಂಬುದು ಮಾತ್ರ ಖಚಿತವಾಗಿಲ್ಲ.





# ರಘು ಬಾಲಿವುಡ್ ಬಯಕೆ

ಕನ್ನಡದ ಹೆಮ್ಮೆಯ ಗಾಯಕ ರಘು ದೀಕ್ಷಿತ್, ಕನ್ನಡಿಗರಿಗೆ ಪರಿಚಿತರಾಗುವ ಮುನ್ನವೇ ಮುಂಬೈ, ದೆಹಲಿಯಂತಹ ನಗರಗಳಲ್ಲಿ ಖ್ಯಾತರಾದವರು. ಬಳಿಕ ಕನ್ನಡದಲ್ಲಿಯೂ ಅವರ ಹಾಡುಗಳು ಜನಪ್ರಿಯವಾದವು. ಇಡೀ ದೇಶ ಗುರುತಿಸುವಂತೆ ಆಲ್ಬಂಗಳನ್ನು ಮಾಡಿ ಕೀರ್ತಿ ಗಳಿಸಿದ ಅವರು, ಅದಕ್ಕೆ ಪಟ್ಟ ಶ್ರಮ ಸಾಮಾನ್ಯವಾದುದ್ದೇನಲ್ಲ. ಈ ಶ್ರಮ ಅವರಿಗೆ ಬಾಲಿವುಡ್‌ನಲ್ಲಿ ಸಂಗೀತ ನಿರ್ದೇಶನದ ಬಾಗಿಲನ್ನೂ ತೆರೆಯಿತು. ‘ಮುಜ್ಸೆ ಫ್ರೆಂಡ್‌ಷಿಪ್ ಕರೋಗೆ’, ‘ಕ್ವಿಕ್ ಗನ್ ಮುರುಗನ್’,‘ಬೇವಕೂಫಿಯಾನ್’ ಚಿತ್ರಗಳಿಗೆ ಮಟ್ಟು ಹಾಕಿದ್ದ ರಘು, ಸೈಫ್ ಅಲಿಖಾನ್ ನಟನೆಯ ‘ಷೆಫ್’ ಚಿತ್ರಕ್ಕೆ ಸಂಗೀತ ಹೊಸೆಯುವ ಅವಕಾಶ ಪಡೆದುಕೊಂಡಿದ್ದಾರೆ. ಬಾಲಿವುಡ್‌ನಲ್ಲಿ ಇನ್ನಷ್ಟು ಸಿನಿಮಾಗಳಿಗೆ ಸಂಗೀತ ನೀಡುವ ಬಯಕೆಯನ್ನೂ ವ್ಯಕ್ತಪಡಿಸಿದ್ದಾರೆ. ಸ್ವತಂತ್ರ ಸಂಗೀತ ನಿರ್ದೇಶಕರು ಮತ್ತು ದೇಸಿ ಸಂಗೀತವನ್ನು ಬೆಳೆಸುವುದಕ್ಕಿಂತ, ಸಿನಿಮಾ ಮತ್ತು ಸಿನಿಮಾದ ಇತರೆ ಎಲ್ಲ ಭಾಗಗಳಿಗೂ ಪ್ರಚಾರ ನೀಡುತ್ತಾರೆ ಎನ್ನುವುದು ರಘು ಅಭಿಪ್ರಾಯ. ಇದರಲ್ಲಿ ಯಾವ ತಪ್ಪೂ ಇಲ್ಲ. ಇದು ಸ್ವಾಭಾವಿಕ ಎಂದೂ ಅವರು ಹೇಳುತ್ತಾರೆ. ಬಾಲಿವುಡ್ ಸ್ವತಃ ಬಾಲಿವುಡ್‌ಗೆ ಎಕ್ಸ್‌ಪ್ಲೋಸರ್ ನೀಡುತ್ತದೆ. ಬಾಲಿವುಡ್ ಎನ್ನುವುದು ಒಂದು ಉದ್ಯಮ. ಹಣ ಹೂಡಿ ಪ್ರಚಾರ ಮತ್ತು ಮಾರಾಟ ನಡೆಸುವ ಉದ್ಯಮ. ಅದರಲ್ಲಿ ಸಂಗೀತಗಾರರಿಗೆ ಆ ಮಹತ್ವ ಬಯಸುವುದು ಸರಿಯಲ್ಲ ಎನ್ನುವ ಉತ್ತರವನ್ನೂ ಅವರು ಕಂಡುಕೊಂಡಿದ್ದಾರೆ. ಚಂದನವನದಲ್ಲಿ ಆಗಾಗ ಗಿಟಾರ್ ಹಿಡಿದು ಕಾಣಿಸಿಕೊಳ್ಳುವ ರಘು ಅವರಿಗೆ ಬಾಲಿವುಡ್ ಮತ್ತಷ್ಟು ಅವಕಾಶಗಳನ್ನು ನೀಡಲಿದೆ ಎಂಬ ನಿರೀಕ್ಷೆಯಿದೆ.

■ ಅಮಿ